O.S. No. 34/2020
P.W. - 1

**ದಿನಾಂಕಃ17-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

***ಮುಂದುವರೆದ ಮುಖ್ಯ ವಿಚಾರಣೆಃ ಎಸ್.ಕೆ.ಪಿ ವಕೀಲರಿಂದ ವಾದಿ ಪರವಾಗಿಃ-***

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ಹೇಳುತ್ತಾರೆ.

ಸಾಕ್ಷಿ ದಾಖಲೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಈ ಕೆಳಕೆಂಡಂತೆ ಗುರುತಿಸಲಾಯಿತು.

ನಿಪಿ-1 – ನೋಂದಾಯಿತ ಕ್ರಯದ ಕರಾರು ಪತ್ರ

ನಿಪಿ-2 – ಋಣಭಾರ ಪ್ರಮಾಣ ಪತ್ರ

ನಿಪಿ-3 – ರಾಯಚೂರು ಗ್ರಾಮದ ಸರ್ವೆ ನಂ. 1436/2 ರಲ್ಲಿನ 4 ಏಕರೆ 18 ಗುಂಟೆ ಬಾಬ್ತು 2001-02 ರಿಂದ 2019-20 ರ ಪಹಣಿ ಪತ್ರಿಕೆಗಳು

ನಿಪಿ-4 – ಮತ್ತೊಂದು ಋಣಭಾರ ಪ್ರಮಾಣ ಪತ್ರ

ನಿಪಿ-5 – ವಕೀಲರ ನೋಟಿಸು ದಿ. 13-01-2020 ರ ಪ್ರತಿ

ನಿಪಿ-6 – ನೋಂದಾಯಿತ ಅಂಚೆ ರಸೀದಿಗಳು (2)

ನಿಪಿ-7 – ಮೂಲ 1 ನೇ ಪ್ರತಿವಾದಿಯ ಮರಣ ಪ್ರಮಾಣ ಪತ್ರ

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನಕ್ಕೆ ಬೆರಳಚ್ಚುಗಾರ್ತಿರವರು ಬೆರಳಚ್ಚು ಮಾಡಿರುತ್ತಾರೆ, ಸಾಕ್ಷಿಯು ಕೇಳಿಸಿಕೊಂಡು ಮತ್ತು ಉಭಯತ್ರ ವಕೀಲರು ಗಣಕಯಂತ್ರದ ಮುದ್ರಣವನ್ನು ನೋಡಿ, ಓದಿ ಮತ್ತು ತಿಳಿದುಕೊಂಡಿರುತ್ತಾರೆ )

sd/-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**

**ರಾಯಚೂರು.**